ಚರ್ಚೆ ಆದ ದಿನಾಂಕ 29.3.2022 61

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಾದ ಶ್ರೀ. ಎನ್.ರವಿಕುಮಾರ್, ಶ್ರೀ. ಯು.ಬಿ.ವೆಂಕಟೇಶ್, ಶ್ರೀ. ದಿನೇಶ್ ಗೂಳಿಗೌಡ ಹಾಗೂ ಶ್ರೀ. ಡಿ.ಎಸ್. ಅರುಣ್ ಇವರುಗಳು ನಿಯಮ 330ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರ ಹೇಳಿಕೆ**

**ಸೂಚನೆ:**

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಹಲವಾರು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುತ್ತಿದ್ದು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಅಧಿಕಾರಿಗಳ ನಿರ್ಲಕ್ಷ, ಉದಾಸೀನ ಧೋರಣೆಯಿಂದ ಹಲವಾರು ದೂರುಗಳು ಸಾರ್ವಜನಿಕ ವಲಯದಲ್ಲಿ ಬರುತ್ತಿರುವುದನ್ನೂ ಗಮನಿಸಬಹುದಾಗಿದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಪ್ರತಿವರ್ಷ ನೀಟ್ ಪರೀಕ್ಷೆ ಬರೆದು ವೈದ್ಯಕೀಯ ಶಿಕ್ಷಣ ಪ್ರವೇಶ ಬಯಸುವ ವಿದ್ಯಾರ್ಥಿಗಳ ದಾಖಲೆಗಳ ಪರೀಕ್ಷಣೆ, ವೈದ್ಯಕೀಯ ಕಾಲೇಜುಗಳ ಆಯ್ಕೆಗಾಗಿ ಕೌನ್ಸಿಲಿಂಗ್ ಮುಂತಾದ ಪ್ರಕ್ರಿಯೆಗಳನ್ನು ನಡೆಸುತ್ತದೆ. ಈ ಪ್ರಕ್ರಿಯೆಯ ಸಂಕೀರ್ಣತೆಯಿಂದಾಗಿ ಹಲವಾರು ವಿದ್ಯಾರ್ಥಿಗಳು ಖಾಸಗಿ ಏಜೆನ್ಸಿಗಳ ಸಹಾಯ ಪಡೆದು ಈ ಪ್ರಕ್ರಿಯೆಲ್ಲಿ ಪಾಲ್ಗೊಳ್ಳುತ್ತಿರುವುದು ಬೇಸರದ ವಿಷಯ. ಇದರಿಂದಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಹಲವಾರು ಅಕ್ರಮಗಳ ಸ್ಥಳವಾಗುತ್ತಿರುವುದಾಗಿದೆ. ವೈದ್ಯಕೀಯ ಪ್ರವೇಶ ಬಯಸಿ ಒಬ್ಬ ವಿದ್ಯಾರ್ಥಿಯು ಸಲ್ಲಿಸಿದ ಡಿ.ಡಿಯನ್ನು ಇನ್ನೊಬ್ಬ ವಿದ್ಯಾರ್ಥಿಗೆ ಲಗತ್ತಿಸಿ ಆ ವಿದ್ಯಾರ್ಥಿಗೆ ಪ್ರವೇಶ ದೊರಕಿಸಿದಂತಹಾ ಹಲವಾರು ಪ್ರಕರಣಗಳು ಬೆಳಕಿಗೆ ಬಂದಿವೆ. ಪ್ರತಿಭಾವಂತಹ ವಿದ್ಯಾರ್ಥಿಗಳಿಗೆ ಅನ್ಯಾಯವಾಗದಂತೆ ತಡೆಯಲು ಮತ್ತು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಎಲ್ಲಾ ಅಕ್ರಮಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ತುರ್ತು ಕ್ರಮ ಕೈಗೊಳ್ಳುವ ಕುರಿತು ಮಾನ್ಯ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರ ಗಮನ ಸೆಳೆಯ ಬಯಸುತ್ತೇನೆ.

## ಉತ್ತರ

**ಮಾನ್ಯ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರ ಹೇಳಿಕೆ:**

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನ್ಯಾಷನಲ್ ಟೆಸ್ಟಿಂಗ್ ಏಜನ್ಸಿ ನಡೆಸುವ ಪರೀಕ್ಷೆಗೆ ಹಾಜರಾಗಿ, ನೀಟ್ ಪರೀಕ್ಷೆ ಬರೆದು, ವೈದ್ಯಕೀಯ ಶಿಕ್ಷಣ ಪ್ರವೇಶಕ್ಕೆ ಅರ್ಹರಾಗಿರುವ ವಿದ್ಯಾರ್ಥಿಗಳಿಗೆ ಅರ್ಜಿ ಆಹ್ವಾನಿಸಿ, ದಾಖಲೆ ಪರಿಶೀಲನೆ ನಡೆಸಿ ಹಾಗೂ ಆನ್‌ಲೈನ್ ಮೂಲಕ ಸೀಟು ಹಂಚಿಕೆ ಮಾಡುತ್ತದೆ. ನೀಟ್ ಪರೀಕ್ಷೆಗೆ ಸಹ ಅಭ್ಯರ್ಥಿಗಳು ಅರ್ಜಿಯನ್ನು ಆನ್‌ಲೈನ್ ಮುಖಾಂತರ ಸಲ್ಲಿಸಬೇಕಾಗಿದ್ದು, ಪ್ರಾಧಿಕಾರಕ್ಕೂ ಸಹ ಆನ್‌ಲೈನ್ ಮುಖಾಂತರವೇ ಅರ್ಜಿಯನ್ನು ಸಲ್ಲಿಸಬೇಕಾಗಿರುತ್ತದೆ. ಅಭ್ಯರ್ಥಿಗಳ ದಾಖಲೆ ಪರಿಶೀಲನೆ

ಪ್ರಾಧಿಕಾರದಲ್ಲಿ ಅಥವಾ ಪ್ರಾಧಿಕಾರದಿಂದ ನೇಮಿಸಲ್ಪಟ್ಟ ಸಿಬ್ಬಂದಿಯಿಂದ ಜಿಲ್ಲಾ ಕೇಂದ್ರಗಳಲ್ಲಿ ನಡೆಯುತ್ತದೆ. ಇಲ್ಲಿ ಯಾವುದೇ ಖಾಸಗಿ ಏಜನ್ಸಿಗಳಿಗೆ ಪ್ರವೇಶವಿಲ್ಲ. ದಾಖಲಾತಿ ಪರಿಶೀಲನೆಗೆ ಅಭ್ಯರ್ಥಿ ಖುದ್ದಾಗಿ ಹಾಜರಿರಬೇಕಿರುತ್ತದೆ ಹಾಗೂ ಅಭ್ಯರ್ಥಿಯೊಡನೆ ಒಬ್ಬ ಪೋಷಕರು ಮಾತ್ರ ಬರಲು ಅವಕಾಶ ನೀಡಲಾಗಿರುತ್ತದೆ. ದಾಖಲಾತಿ ಪರಿಶೀಲನೆ ನಂತರ ಅಭ್ಯರ್ಥಿಗೆ ವಿತರಿಸಲಾದ "ಸೀಕ್ರೆಟ್ ಕೀ" ಅನ್ನು ಬಳಸಿ ಅಭ್ಯರ್ಥಿಯು ಆನ್‌ಲೈನ್ ಮೂಲಕ ಸೀಟು ಹಂಚಿಕೆಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬೇಕಾಗಿರುತ್ತದೆ. ಇಲ್ಲಿಯು ಸಹ ಯಾವುದೇ ಖಾಸಗಿ ಏಜನ್ಸಿಯ ಪಾತ್ರವಿರುವುದಿಲ್ಲ.

ವೈದ್ಯಕೀಯ ಪ್ರವೇಶ ಬಯಸಿ, ಒಬ್ಬ ವಿದ್ಯಾರ್ಥಿಯು ಸಲ್ಲಿಸಿದ್ದ ಡಿ.ಡಿ ಯನ್ನು ಇನ್ನೊಬ್ಬ ವಿದ್ಯಾರ್ಥಿಗೆ ಲಗತ್ತಿಸಿ, ಆ ವಿದ್ಯಾರ್ಥಿಗೆ ಪ್ರವೇಶ ದೊರಕಿಸಿದಂತಹ ಪ್ರಕರಣದಲ್ಲಿ ಕೆ.ಇ.ಎ ಪಾತ್ರವಿರುವುದಿಲ್ಲ. ಸೀಟು ಹಂಚಿಕೆಯಲ್ಲಿ ಶುಲ್ಕ ಪಾವತಿ ಆನ್‌ಲೈನ್ ಮುಖಾಂತರ ಆಗುತ್ತದೆ. ಕೊನೆಯ ಮಾಪ್-ಅಪ್ ಸುತ್ತಿನ ಸೀಟು ಹಂಚಿಕೆಯಲ್ಲಿ ಭಾಗವಹಿಸುವ ಅಭ್ಯರ್ಥಿಗಳು ಮಾತ್ರ ಖುದ್ದಾಗಿ ಶುಲ್ಕ ಪಾವತಿಸಲು ಡಿ.ಡಿಯೊಂದಿಗೆ ಪ್ರಾಧಿಕಾರದಲ್ಲಿ ಹಾಜರಿರಬೇಕಿರುತ್ತದೆ. ಈ ಸಮಯದಲ್ಲಿ ಅಭ್ಯರ್ಥಿಗೆ ಮತ್ತು ಒಬ್ಬ ಪೋಷಕರಿಗೆ ಮಾತ್ರ ಖುದ್ದಾಗಿ ಹಾಜರಿರಲು ಅವಕಾಶವಿರುತ್ತದೆ ಹಾಗೂ ತನ್ನ ಜೊತೆ ಹಾಜರಿರುವ ಪೋಷಕರ ಮಾಹಿತಿ ಹಾಗೂ ಭಾವ ಚಿತ್ರ ಅಭ್ಯರ್ಥಿಯು ಮೊದಲು ಪ್ರಾಧಿಕಾರಕ್ಕೆ ಸಲ್ಲಿಸಬೇಕಿರುತ್ತದೆ. ಈ ಮಾಹಿತಿಯ ಆಧಾರದ ಮೇಲೆ ಅಭ್ಯರ್ಥಿಗೂ ಹಾಗೂ ಅವನ ಪೋಷಕರಿಗೂ ಎಂಟ್ರಿ ಪಾಸ್‌ನ್ನು ನೀಡಲಾಗಿರುತ್ತದೆ. ಆದ್ದರಿಂದ ಒಬ್ಬ ಅಭ್ಯರ್ಥಿಯ ಡಿ.ಡಿಯನ್ನು ಇನ್ನೊಬ್ಬ ಅಭ್ಯರ್ಥಿಗೆ ನೀಡುವ ಪ್ರಮೇಯವು ಇರುವುದಿಲ್ಲ. ಆದರೆ 2018ರಲ್ಲಿ ನಡೆದ ಒಂದು ಪ್ರಕರಣದಲ್ಲಿ ಶ್ರೀ ಧನುಷ್ ಎಂಬ ಅಭ್ಯರ್ಥಿಯು ತನ್ನ ಪೋಷಕರೆಂದು ಶ್ರೀ ಶ್ರೀಧರ್.ಕೆ ಎಂಬುವರನ್ನು ಕರೆತಂದಿರುತ್ತಾನೆ. ಮಾಪ್-ಅಪ್ ಸುತ್ತಿನಲ್ಲಿ ಧನುಷ್ ಅವರಿಗೆ ಯಾವುದೇ ಸೀಟು ಹಂಚಿಕೆಯಾಗಿರುವುದಿಲ್ಲ. ತದನಂತರ ಶ್ರೀ ಧನುಷ್ ಅವರ ತಂದೆ ಶ್ರೀ ವಿಜಯಶಂಕರ್ ರವರು ತನ್ನ ಮಗನ ಡಿ.ಡಿ ಕಳೆದಿರುವುದಾಗಿ ಹಾಗೂ ಮತ್ತೊಬ್ಬ ಅಭ್ಯರ್ಥಿ ಹರಿಣಿ.ಕೆ ರವರು ಅದನ್ನು ಉಪಯೋಗಿಸಿಕೊಂಡು ನೀಟ್ ಸೀಟು ಪಡೆದಿರುವುದಾಗಿ ಗೌರವಾನ್ವಿತ ಲೋಕಾಯುಕ್ತರಿಗೆ ದೂರು ನೀಡಿರುತ್ತಾರೆ.

ಲೋಕಾಯುಕ್ತ ಕಚೇರಿಯಲ್ಲಿ ವಿಚಾರಣೆ ನಡೆದಾಗ ತಿಳಿದು ಬಂದ ಅಂಶವೇನೆಂದರೆ, ಶ್ರೀ ವಿಜಯಶಂಕರ್ ರವರು ತನ್ನ ಮಗನಾದ ಶ್ರೀ ಧನುಷ್ ಗೆ ವೈದ್ಯಕೀಯ ಸೀಟು ಕೊಡಿಸಲು ಶ್ರೀ ಶ್ರೀಧರ್ ರವರೊಡನೆ ಮಾತುಕತೆ ನಡೆಸಿದ್ದು, ಅದರಂತೆ ಅಭ್ಯರ್ಥಿಯಾದ ಶ್ರೀ ಧನುಷ್ ತನ್ನ ಪೋಷಕ ಎಂದು ಶ್ರೀ ಶ್ರೀಧರ್ ಜೊತೆಗೆ ಮಾಪ್-ಅಪ್ ಸುತ್ತಿಗೆ ಹಾಜರಾಗಿರುತ್ತಾರೆ. ಆದರೆ ಶ್ರೀ ಧನುಷ್ ಗೆ ಯಾವ ಸೀಟು ಹಂಚಿಕೆಯಾಗಿರುವುದಿಲ್ಲ. ಆದರೆ ಶ್ರೀ ಧನುಷ್ ತಂದಿದ್ದ ಡಿ.ಡಿಯನ್ನು ಶ್ರೀ ಶ್ರೀಧರ್ ಮಾಪ್-ಅಪ್ ಸುತ್ತಿನಲ್ಲಿ ಭಾಗವಹಿಸಿದ್ದ ತನ್ನ ಮಗಳಾದ ಹರಿಣಿ.ಕೆ ಇವರಿಗೆ ನೀಡಿರುತ್ತಾರೆ. ಆದರೆ ಶ್ರೀ ಶ್ರೀಧರ್.ಕೆ ಡಿ.ಡಿ ಹಣವನ್ನು ಶ್ರೀ ವಿಜಯ್ ಶಂಕರ್ ಅವರಿಗೆ ಹಿಂದಿರುಗಿಸಿರುವುದಿಲ್ಲ. ಈ ಪ್ರಕರಣವನ್ನು ಲೋಕಾಯುಕ್ತದಲ್ಲಿ ವಿಚಾರಣೆ ನಡೆಸಿ, ಶ್ರೀ ವಿಜಯ್ ಶಂಕರ್ ರವರಿಗೆ ಶ್ರೀ ಶ್ರೀಧರ್ ರವರ ಮೇಲೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲು ಆದೇಶಿಸಿರುತ್ತಾರೆ ಹಾಗೂ ಪೊಲೀಸ್ ಠಾಣೆಯಲ್ಲಿ ಶ್ರೀ ವಿಜಯ್ ಶಂಕರ್ ದೂರು ದಾಖಲಿಸಿರುತ್ತಾರೆ. ಈ ಪ್ರಕರಣದಲ್ಲಿ ಪ್ರಾಧಿಕಾರದ ಪಾತ್ರವಿರುವುದಿಲ್ಲ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಸೀಟು ಹಂಚಿಕೆ ಪ್ರಕ್ರಿಯೆಯಲ್ಲಿ ಯಾವುದೇ ಖಾಸಗಿ ಏಜನ್ಸಿ ಭಾಗವಹಿಸಲು ಅವಕಾಶವಿರುವುದಿಲ್ಲ ಹಾಗೂ ನಿಷ್ಪಕ್ಷಪಾತವಾಗಿ ನಿಯಮಾನುಸಾರ ಸೀಟು ಹಂಚಿಕೆಯನ್ನು ನಡೆಸಲಾಗುತ್ತದೆ.

ಇಡಿ 57 ಟಿಇಸಿ 2022

(ಡಾ॥ ಅಶ್ವಥ್ ನಾರಾಯಣ ಸಿ.ಎನ್.)
ಉನ್ನತ ಶಿಕ್ಷಣ, ಐಟಿ&ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ
ಜೀವನೋಪಾಯ ಇಲಾಖೆ ಸಚಿವರು